# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

## ರಾಜ್ಯ ಸಮಿತಿ, ಕರ್ನಾಟಕ

**ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ,**

**ಹೋರಾಟದ ಶುಭಾಶಯಗಳು.**

ರೈಲ್ವೆ ಇಲಾಖೆಯಲ್ಲಿ ಸಿ ಮತ್ತು ಡಿ ಹುದ್ದೆಗಳಲ್ಲಿ ಸಿಬ್ಬಂದಿಗಳ ನೇಮಕಾತಿಯಲ್ಲಿ ಕರ್ನಾಟಕದ ಸ್ಥಳೀಯ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಹೋರಾಟವನ್ನು ಬೆಂಬಲಿಸಿ ಮತ್ತು ಕರ್ನಾಟಕದ ಜನತೆಯನ್ನು ಅವಹೇಳನ ಮಾಡಿರುವ ಲಾಲೂ ಪ್ರಸಾದ್ ಹೇಳಿಕೆಯನ್ನು ಖಂಡಿಸುವ ನಮ್ಮ ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ತಾವುಗಳು ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

**ಕ್ರಾಂತಿಕಾರಿ ವಂದನೆಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**19 ಫೆಬ್ರವರಿ, 2008**

---

ರೈಲ್ವೆ ಇಲಾಖೆಯಲ್ಲಿ ಸಿ ಮತ್ತು ಡಿ ಹುದ್ದೆಗಳಲ್ಲಿ ಸಿಬ್ಬಂದಿಗಳ ನೇಮಕಾತಿಯಲ್ಲಿ ಕರ್ನಾಟಕದ ಸ್ಥಳೀಯ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಬೇಡಿಕೆಯ ಮೇರೆಗೆ ಕರ್ನಾಟಕದಾದ್ಯಂತ ನಡೆಯುತ್ತಿರುವ ಹೋರಾಟವನ್ನು ಸಿಪಿಐ (ಮಾವೋವಾದಿ) ಪಕ್ಷ ಬೆಂಬಲಿಸುತ್ತದೆ. ಈ ಹೋರಾಟವನ್ನು ಹೀನವಾಗಿ ವರ್ಣಿಸಿ 'ಕೊಳಕು ಜನ' ಎಂದು ಕೇಂದ್ರ ರೈಲ್ವೆ ಸಚಿವ ಲಾಲು ಪ್ರಸಾದ್ ಯಾದವ್ ಹೇಳಿರುವುದನ್ನು ಖಂಡಿಸುತ್ತೇವೆ. ಕರ್ನಾಟಕದ ಐದು ಕೋಟಿ ಜನರ ಸ್ವಾಭಿಮಾನ ಸ್ವಾತಂತ್ರ್ಯವನ್ನು ಗೌರವಿಸದೆ ಅವಮಾನಿಸಿದ ವಿಷಯವಾಗಿದೆ. ಕನ್ನಡ ರಾಷ್ಟ್ರೀಯತೆಯ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ನೆಲೆಗಳ ಮೇಲೆ ದಬ್ಬಾಳಿಕೆ ನಡೆಸುತ್ತ ಬಂದಿರುವ ಕೇಂದ್ರಾಡಳಿತದ ಅಧಿಪತ್ಯದ ದನಿಯಾಗಿದೆ. ಕನ್ನಡ ನೆಲ, ಜಲ, ಭಾಷೆಯನ್ನು ಶೋಷಣೆ ಮಾಡುವ ಸಾಮ್ರಾಜ್ಯವಾದಿಗಳು ದಲ್ಲಾಳಿ ಬಂಡವಾಳಶಾಹಿಗಳ ದಮನ ನೀತಿಯಾಗಿದೆ. ಕೇಂದ್ರಾಧಿಪತ್ಯಕ್ಕೆ ಮಂಡಿಯೂರಿ ಕರ್ನಾಟಕವನ್ನು ಕೊಳ್ಳೆ ಹೊಡೆಯಲು ಅನುವು ಮಾಡಿಕೊಟ್ಟಿರುವ ಕರ್ನಾಟಕಕ್ಕೆ ದ್ರೋಹ ಬಗೆಯುವ ಕರ್ನಾಟಕದ ದಲ್ಲಾಳಿ ರಾಜಕಾರಣಿಗಳ ಪರಾವಲಂಬಿತನದಿಂದ ಮಾಡಿರುವ ದುರ್ವಚನವಾಗಿದೆ.

ಭಾರತ ಹಲವಾರು ರಾಷ್ಟ್ರೀಯತೆಗಳನ್ನು ಒಳಗೊಂಡ ಒಂದು ಉಪಖಂಡ. ಭಾರತ ಎಂಬುದು ರಾಷ್ಟ್ರೀಯತೆಗಳ ಬಂದೀಖಾನೆಯಾಗಿದೆ. ಕೇಂದ್ರ ಸರ್ಕಾರ ಎಂಬ ಹೆಸರಲ್ಲಿ ರೈಲ್ವೆ, ಸಂಪರ್ಕ, ಯೋಜನೆ ಮತ್ತು ಕೀಲಕ ಉತ್ಪಾದನಾ ವಲಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ರಾಜ್ಯ ಸರ್ಕಾರಗಳನ್ನು ಒಂದು ಮುನ್ಸಿಪಾಲಿಟಿಯಂತೆ ನಡೆಸಲಾಗುತ್ತಿದೆ. ಕೇಂದ್ರ ರಾಜ್ಯ ಸಂಬಂಧಗಳ ಬಗೆಗಿನ ಸರ್ಕಾರಿಯಾ ನಿಯೋಗದ ಶಿಫಾರಸುಗಳನ್ನು ಇಂದಿನವರೆಗೂ ಜಾರಿ ಮಾಡುತ್ತಿಲ್ಲ. ಗಡಿ, ನದಿ ವಿವಾದಗಳನ್ನು ಇತ್ಯರ್ಥ ಮಾಡದೆ ರಾಷ್ಟ್ರೀಯತೆಗಳ ಮಧ್ಯೆ ದ್ವೇಷ ಬೆಳೆಸಿ ಜನರ ಮಧ್ಯೆ ಐಕ್ಯತೆಯನ್ನು ಹಾಳುಗೆಡವುತ್ತಿದ್ದಾರೆ. ಕೇಂದ್ರ ಕಚೇರಿಗಳಲ್ಲಿ ಬಲ್ಲವರೆಂಬ ಹೆಸರಿನಲ್ಲಿ ಇಂಗ್ಲೀಷ್, ಹಿಂದಿ ತಜ್ಞರುಗಳನ್ನು ಆಯ್ಕೆ ಮಾಡಿಕೊಂಡು ಸ್ಥಳೀಯರಿಗೆ ವಂಚನೆ ಮಾಡಲಾಗುತ್ತಿದೆ. ಭ್ರಷ್ಟಾಚಾರ ಭೂತದ ಮುಂದೆ ಸಾಮಾನ್ಯ ಬಡಜನತೆ ಉದ್ಯೋಗ ವಂಚಿತರಾಗಿ ಬದುಕುತ್ತಿದ್ದಾರೆ. ರೈಲ್ವೆಯಲ್ಲಿ ಸಿ ಮತ್ತು ಡಿ ಹುದ್ದೆಯ ಕೆಲಸಗಳು ಸ್ಥಳೀಯರ ಹಕ್ಕು ಕೂಡ. ಒಕ್ಕೂಟ ವ್ಯವಸ್ಥೆಯಲ್ಲಿ ಸ್ಥಳೀಯ ಜನರ ಹಕ್ಕುಗಳಿಗೆ ಆದ್ಯತೆ ನೀಡುತ್ತ ಇತರೆ ರಾಜ್ಯದಿಂದ ಬರುವವರಿಗೂ ಕೆಲಸ ನೀಡಬೇಕಾಗಿದೆ. ಹುದ್ದೆಗಳ ಮಿತಿ ಮತ್ತು ನಿರುದ್ಯೋಗ ಸಮಸ್ಯೆ ತೀವ್ರವಾಗಿರುವ ಈ ಭ್ರಷ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕೆಂಬ ಬೇಡಿಕೆ ಪ್ರಜಾತಾಂತ್ರಿಕವಾದದ್ದು. ಹಾಗೆಯೇ ಕರ್ನಾಟಕದಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂದು ಹಲವಾರು ವರ್ಷಗಳಿಂದ ಜನ ಹೋರಾಡುತ್ತ ಬಂದಿದ್ದಾರೆ. ಆದರೆ ಕೇಂದ್ರ ಸರ್ಕಾರ ಅದನ್ನು ನಿರ್ಲಕ್ಷಿಸಿ ಏಕತಾ ರೂಪವನ್ನು ಮಾತ್ರ ಹೇರಲು ಪ್ರಯತ್ನಿಸುತ್ತಿದೆ. ಇದರ ಮೂಲಕವೂ ದುಡಿಯುವ ಜನರ ಮಧ್ಯೆ ಪೈಪೋಟಿಯನ್ನು ಸೃಷ್ಟಿ ಮಾಡಿ ಐಕ್ಯತೆಯನ್ನು ಮುರಿದು ಆಳುತ್ತಿದ್ದಾರೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಈ ಹೋರಾಟ ಸಾರ್ವಜನಿಕ ಮನ್ನಣೆ ಪಡೆದಿದೆ. ತಮ್ಮ ಹಕ್ಕಿನ ಬಗ್ಗೆ ಚೈತನ್ಯವನ್ನು ತುಂಬಿದೆ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಮತ್ತು ದಮನಕಾರಿ ನೀತಿಯನ್ನು ವಿರೋಧಿಸಿ ರಾಷ್ಟ್ರೀಯತಾ ಚೈತನ್ಯವನ್ನು ಬೆಳೆಸಿದೆ. ರಾಷ್ಟ್ರೀಯತೆಗಳನ್ನು ದೇಶವನ್ನು ಶೋಷಿಸುವ ಸಾಮ್ರಾಜ್ಯಶಾಹಿಗಳ ವಿರುದ್ಧ ಸಿಡಿದೇಳುವ ಪ್ರಜ್ಞೆಯನ್ನು ಮೂಡಿಸಿದೆ. ಸಾಮಾಜಿಕ ವಿಮೋಚನೆಗಾಗಿ ಹೋರಾಟ ಕೆಚ್ಚೆದೆಯನ್ನು ಬೆಳೆಸಿದೆ. ಈ ವೀರೋಚಿತ ಹೋರಾಟವನ್ನು ರಾಜಿ ಇಲ್ಲದೆ ಕರ್ನಾಟಕವನ್ನು ಕೊಳ್ಳೆ ಹೊಡೆಯುವ ಊಳಿಗಮಾನ್ಯ, ದಲ್ಲಾಳಿ ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ ವಿರುದ್ಧದ ಕಹಳೆಯಾಗಿ ಪರಿವರ್ತಿಸಬೇಕಾಗಿದೆ. ಜನತೆಯ ಹೋರಾಟಗಳನ್ನು ಕೇವಲ ತಮ್ಮ ಓಟು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡು ಜನತೆಗೆ ದ್ರೋಹ ಬಗೆದಿರುವ ಚರಿತ್ರೆ ನಮ್ಮ ಕಣ್ಣಮುಂದೆ ಇದೆ. ಈ ಅನುಭವದಿಂದ ಪಾಠ ಕಲಿತು ವಿಮೋಚನೆಗಾಗಿನ ಹೋರಾಟವನ್ನು ಮುಂದುವರಿಸಲು ಪಣ ತೊಡಬೇಕಾಗಿದೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**19 ಫೆಬ್ರವರಿ, 2008**